ಸೃಜನಿ

**SRUJANI: Indian Journal of Innovative Research and Development (SIJIRD)**
Volume-3 Issue 3, July-August 2024, Pp. 94-97
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕೊಡವರು ಕುರ್ದಿಗಳೆ : ಒಂದು ವಿಶ್ಲೇಷಣೆ

**ಡಾ. ಶ್ರೀನಿವಾಸ ಟಿ**
ಸಹಾಯಕ ಪ್ರಾಧ್ಯಾಪಕರು, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು.

***Abstract:***
*ಕೊಡವರ ಆಚಾರ ವಿಚಾರಗಳ ಸಾಂಸ್ಕೃತಿಕ ಅಧ್ಯಯನ, ಕೊಡವರ ಮೂಲ ಚರಿತ್ರೆ, ಅವರು ಯಾರು ಎಂಬುದನ್ನು ಅರಿಯ ಬೇಕಾದರೆ ಅಧ್ಯಯನ ಬಹಳ ಮುಖ್ಯವಾಗುತ್ತದೆ. ಕೊಡವರ ಮೂಲದ ಬಗ್ಗೆ ಹಲವಾರು ಅಧ್ಯಯನಗಳು ಪ್ರಕಟವಾಗಿದ್ದು ಅವುಗಳಲ್ಲಿನ ಕೆಲವು ಅಭಿಪ್ರಾಯಗಳನ್ನು ವಿಮರ್ಶಿಸಬಹುದು. ಬಿ.ಡಿ.ಸುಬ್ಬಯ್ಯ ಎಂಬ ವಿದ್ವಾಂಸರು ಕೊಡವರು 'ಕುರ್ದಿ' ಜನಾಂಗದವರೆಂದು ಅಭಿಪ್ರಾಯ ಪಟ್ಟಿದ್ದಾರೆ. ಅವರ ಪ್ರಕಾರ ಈ ಕುರ್ದಿಗಳು ಟರ್ಕಿಯ ಈಶಾನ್ಯ ಭಾಗದಿಂದ ವಾಯುವ್ಯದವರೆಗೂ ಹರಡಿದ್ದು, ಇಸ್ಲಾಂ ಧರ್ಮವನ್ನು ಅಂಗೀಕರಿಸಿದ ಅರಬ್ಬರೊಡನೆ ಹೋರಾಡಿ ಕೊನೆಗೆ ಅಲ್ಲಿಂದ ಬಂದು ಕೊಡಗಿನಲ್ಲಿ ನೆಲೆಸಿದವರೆ ಕೊಡವರು ಎಂಬುದು. ಸುಬ್ಬಯ್ಯನವರ ಪ್ರಕಾರ ಕುರ್ದಿಗಳು ಎಂಬ ಜನಾಂಗದವರು ಟರ್ಕಿಯ ಈಶಾನ್ಯ ಭಾಗದಿಂದ ವಾಯುವ್ಯದವರೆಗೆ 600 ಮೈಲು ಉದ್ದಗಲಕ್ಕೂ 120 ರಿಂದ 150 ಮೈಲುಗಳ ಅಗಲಕ್ಕೂ ಹರಡಿಕೊಂಡಿದ್ದರು. ಈಗ ಈ ಪ್ರದೇಶ ಬಹುತೇಕ ಪರ್ಶಿಯಾ, ಇರಾಕ್, ಟರ್ಕಿಗಳಲ್ಲಿ ವಿಲೀನವಾಗಿದೆ ಈ ಪ್ರದೇಶ ಗುಡ್ಡಗಾಡಿನ ಪ್ರದೇಶ. ಪ್ರಾಯಶಃ ಈ ಜನಾಂಗದವರು ಆರ್ಯ ಸಂತತಿಗೆ ಸೇರಿದವರಾಗಿರಬಹುದೆಂದು ಚರಿತ್ರೆಕಾರರು ಅಭಿಪ್ರಾಯ ಪಟ್ಟಿದ್ದಾರೆ.*

***Keywords:*** *ಕೊಡವರು, ಅರಬ್ಬರು, ಗ್ರೀಕರು, ಕುರ್ದಿ ಜನಾಂಗ, ಕೊಡವರ ಮೂಲಚರಿತ್ರೆ, ಯುದ್ಧಪ್ರಿಯರು.*

## ಪೀಠಿಕೆ

ಕುರ್ದಿಗಳು ಯುದ್ಧಪ್ರಿಯರು. ಇವರನ್ನು ಆಳಲು ಗ್ರೀಕರು ಅರಬ್ಬರು ಪ್ರಯತ್ನಿಸಿದರು. ಅಂತಿಮವಾಗಿ ಅರಬ್ಬರು ಇವರನ್ನು ಹೊರಗಟ್ಟಿದರು. ನಂತರ ಇವರು ಏನಾದರು ಎಂಬುದು ಗೊತ್ತಿಲ್ಲ. ಇವರು ಸಮುದ್ರಯಾನದಲ್ಲಿ ನಿಪುಣರಿದ್ದು ಮಲಬಾರನ್ನು ಸೇರಿ ಅಲ್ಲಿಂದ ಕೊಡಗಿಗೆ ಬಂದಿರಬೇಕು. ಆದುದರಿಂದಲೇ ಮಲಯಾಳಂ ಸಂಸ್ಕೃತಿಯು ಬಂದಿದೆಯೆನ್ನಬೇಕೆನ್ನುವ ಅಭಿಪ್ರಾಯಕ್ಕೆ ಆಧಾರ ಕುರ್ದಿಗಳಲ್ಲಿರುವ ಸಂಪ್ರದಾಯ ಪದ್ಧತಿಗಳ ಸಾದೃಶ್ಯ.

ಕೆಲವು ಉದಾಹರಣೆಗಳನ್ನು ನೀಡಿ ಈ ಸಾದೃಶ್ಯವನ್ನು ಪರಿಶೀಲಿಸಲಾಗಿದೆ. ಕುರ್ದಿಗಳಲ್ಲಿ ಒಂದು ಪಂಗಡದ ಯುವಕ ಮತ್ತೊಂದು ಪಂಗಡದ ಯುವತಿಯನ್ನು ಶೌರ್ಯ ಪ್ರದರ್ಶನದಿಂದ ಗೆದ್ದು ತಂದು ವರಿಸುತ್ತಿದ್ದನು. ಯುವತಿಯ ಮನೆಗೆ ಮುತ್ತಿಗೆ ಹಾಕಿ ಜಯಿಸಿ ಅಲ್ಲೇ ವಿವಾಹವಾಗಿ ನಂತರ ಅವರ ಹಿರಿಯರ ಆಶೀರ್ವಾದ ಪಡೆದು ತಪ್ಪು ಕಾಣಿಕೆ ಹಣವನ್ನು ಕೊಟ್ಟು ಸಂತೈಸಿ ನೆಂಟಸ್ತಿಕೆ ಬೆಳೆಸಿ ಕೊಳ್ಳುತ್ತಿದ್ದರು. ಕೊಡವರಲ್ಲೂ ಈ ಪದ್ಧತಿಯಿದ್ದು ಕೊಡವರ ವರನು ಯುದ್ಧಾಲಂಕೃತನಾಗಿ ವಧುವಿನ

***Please cite this article as:*** ಶ್ರೀನಿವಾಸ. ಟಿ (2024). ಕೊಡವರು ಕುರ್ದಿಗಳೆ: ಒಂದು ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(3), 94–97

ಮನೆಗೆ ಹೋಗಿ, ಅಲ್ಲಿ ಶತ್ರು ನಿಗ್ರಹದ ಸಂಕೇತವಾಗಿ ಬಾಳೆದಿಂಡನ್ನು ಕಡಿದು ನಂತರ ಮದುವೆಯಾಗುತ್ತಾನೆ. ಆದರೆ ಈ ಪದ್ಧತಿ ಕುರ್ದಿಗಳದೇ ಎನ್ನಲು ಯಾವ ಆಧಾರವು ಇಲ್ಲ. ಕೊಡವರ ವಿವಾಹ ಪದ್ಧತಿಯು ಶುದ್ಧ ಹಿಂದೂ ಪದ್ಧತಿಯೇ. ಇದು ಹಿಂದಿನ ಕ್ಷತ್ರಿಯರಲ್ಲಿ ಪ್ರಚಲಿತವಾಗಿತ್ತು. ಕುರ್ದಿಗಳಲ್ಲು ಈ ಪದ್ಧತಿಯಿರುವುದು ಹೇಗೆ ಎಂಬುದು ಪ್ರತ್ಯೇಕ ಪ್ರಶ್ನೆ. ಕುರ್ದಿಗಳು ಯಾರು, ಅವರ ಮೂಲ ಯಾವುದು ಎಂದು ಹುಡುಕಿದರೆ ಈ ಪ್ರಶ್ನೆಗೆ ಉತ್ತರ ಸಿಗಬಹುದು. ಒಂದು ವೇಳೆ ಅವರು ಭಾರತದಿಂದ ವಲಸೆ ಹೋದ ಒಂದು ಕ್ಷತ್ರಿಯ ಪಂಗಡವೇ ಇರಬಹುದು. ಅವರು ಆರ್ಯ ಸಂತತಿಗೆ ಸೇರಿದವರು ಎಂಬ ಅಂಶವು ಈ ಸಂಶಯಕ್ಕೆ ಪುಷ್ಠಿ ಕೊಡುತ್ತದೆ. ಅಂತು ಕುರ್ದಿಗಳು ಯಾರೇ ಆದರೂ ಕೊಡವರ ವಿವಾಹ ಪದ್ಧತಿ ಕ್ಷತ್ರಿಯ ಪದ್ಧತಿಯೇ ವಿನಃ ಕುರ್ದಿಗಳದ್ದಲ್ಲ ಎನ್ನಬಹುದು.

ಕುರ್ದಿಗಳು ಮಗು ಹುಟ್ಟಿದರೆ ಕಂಚಿನ ಪಾತ್ರೆಯನ್ನು ಬಡಿಯುವ ಇವರು ಗಂಡು ಮಗುವಾದರೆ ಸಿಡಿಮದ್ದಿನಿಂದ ಶಬ್ದ ಮಾಡುತ್ತಾರೆ. ಕೊಡವರು ಕೋವಿಯಿಂದ ಗುಂಡು ಹಾರಿಸುತ್ತಾರೆ. ಈ ಪದ್ಧತಿಯು ಕುರ್ದಿಗಳದ್ದೇ ಎಂದು ಹೇಳಲು ಆಗುವುದಿಲ್ಲ. ಹಿಂದೆ ಕ್ಷತ್ರಿಯ ಸಮಾಜದಲ್ಲಿ ಮಗು ಹುಟ್ಟಿದರೆ ಭೇರಿ ನಿನಾದ ಮಾಡುತ್ತಿದ್ದರು. ಮೈಸೂರಿನ ಅರಸು ಮನೆತನಗಳಲ್ಲಿ ಈ ಪದ್ಧತಿಯನ್ನು ನೋಡಬಹುದು. ಕೊಡವರು ಕೂಡ ಕಾಡಿನ ಬೆಟ್ಟಗುಡ್ಡಗಳಲ್ಲಿ ವಾಸಿಸುತ್ತಿದ್ದುದರಿಂದ ಶಿಶುವಿನ ಜನನವನ್ನು ತಿಳಿಸುವುದಕ್ಕೆ ಮೇಲಿನ ಪದ್ಧತಿಯನ್ನು ಅನುಸರಿಸುತ್ತಿದ್ದಿರಬಹುದು. ಆದುದರಿಂದ ಈ ಪದ್ಧತಿಯು ಕುರ್ದಿಗಳದ್ದೇ ಎಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ.

ಕೊಡವರ ಕಾರೋಣರ ಆರಾಧನೆಗೂ ಹಾಗೂ ಕುರ್ದಿಗಳಲ್ಲಿ ಪ್ರಭಾವಶಾಲಿಯಾದ ಹಿರಿಯನು ಆರಾಧ್ಯ. ದೇವತೆಯಾಗುವ ಪದ್ಧತಿಗೂ ಸಾಮ್ಯವಿದೆಯೆಂಬ ವಾದವನ್ನು ಪರಿಶೀಲಿಸಿದರೆ ತಿಳಿದು ಬರುವುದೇನೆಂದರೆ, ಈ ಪದ್ಧತಿಯು ಮಲೆಯಾಳದ ಕಡೆಯಿಂದ ಬಂದ ಪದ್ಧತಿಯಾಗಿದ್ದು, ಈ ಕಾರೋಣ ಎಂದರೆ ಕಾರಣ– ಮೂಲ ಕಾರಣ– ಪಿತೃ ಎಂದರ್ಥ. ಪಿತೃಗಳಿಗೆ ಸದ್ಗತಿಯನ್ನು ನೀಡಲು ನಾವು ಅವರಿಗೆ ವೈದಿಕ ವಿಹಿತವಾದ ಶ್ರಾದ್ಧ ಕರ್ಮ ಮತ್ತು ಅನ್ನಸಂತರ್ಪಣೆ ಇತ್ಯಾದಿಗಳನ್ನು ಮಾಡಬೇಕು.

'ವೈದಿಕ ಶ್ರಾದ್ಧಗಳಲ್ಲೂ ಬ್ರಾಹ್ಮಣನೊಬ್ಬನನ್ನು ಕೂರಿಸಿ ಅವನ ಮೇಲೆ ಪಿತೃಗಳನ್ನು ಆವಾಹನೆ ಮಾಡುತ್ತಾರೆ. ಅವನ ಮೇಲೆ ಆ ಪಿತೃ ಆವೇಶ ರೂಪದಲ್ಲಿ ಹಾದು ಬರುತ್ತಾನೆಂದರ್ಥ. ಆತನನ್ನು ತೃಪ್ತಿ ಪಡಿಸಿದರೆ ಆ ಪಿತೃವನ್ನು ತೃಪ್ತಿ ಪಡಿಸಿದಂತೆ. ಈ ಪದ್ಧತಿ ಹಿಂದೂ ವೈದಿಕ ಪದ್ಧತಿ. ಇದೇ ವಿಕೃತವಾಗಿ ದಕ್ಷಿಣದ ಮಲೆಯಾಳ ಮತ್ತು ಸುತ್ತಮುತ್ತ ಪ್ರಚಲಿತವಾಗಿದ್ದು ತಾಂತ್ರಿಕ ವಿಧಿಗಳೆಲ್ಲ ಸೇರಿ ಕೇವಲ ಪಿತೃಪೂಜೆಯಾಗಿ ಅದಕ್ಕೆ ಬೇರೆ ವಿಧಾನಗಳು ಸೇರಿ ಬಂದಿರಬಹುದು. ಅಂತು ಮೇಲಿನ ಕಾರೋಣರ ಆರಾಧನೆಯು ವೈದಿಕ ಶ್ರಾದ್ಧ ಸ್ವರೂಪದ ಒಂದು ದಕ್ಷಿಣ ಪದ್ಧತಿಯೆ ವಿನಃ ಅದು ಕುರ್ದಿಗಳ ಪದ್ಧತಿಯೇನಲ್ಲ.'

ಕುರ್ದಿಗಳಲ್ಲಿ ಮಗು ಹುಟ್ಟಿದ 11 ನೇ ದಿನ ನಾಮಕರಣ ಮಾಡುತ್ತಾರೆ. ಬಹುಶಃ ಕುರ್ದಿಗಳು ಆರ್ಯ ಸಂತತಿಯವರಾದ್ದರಿಂದ ಅದೇ ಪದ್ಧತಿಯನ್ನು ಅನುಸರಿಸುತ್ತಿದ್ದಿರಬಹುದು. ಕೊಡವರಲ್ಲಿಯು 11ನೇ ದಿನ ನಾಮಕರಣ ಶಾಸ್ತ್ರ ಮಾಡುತ್ತಾರೆ. ಅಂತು ಈ ಪದ್ಧತಿ ಎಲ್ಲಾ ಹಿಂದೂಗಳಲ್ಲೂ ಇರುವ ಪದ್ಧತಿ. ಕುರ್ದಿಗಳಲ್ಲಿ ಸ್ತ್ರೀಯರಿಗೆ ಪ್ರತ್ಯೇಕ ಕೋಣೆಯಿರುವುದು ಕೊಡವರಲ್ಲಿ ಕನ್ನಿಕೋಂಬರೆಯೆಂಬ ಪ್ರತ್ಯೇಕ ಕೋಣೆಯಿರುವುದು ಒಂದು ಸಾಮ್ಯವೆಂದು ಗುರ್ತಿಸಲಾಗಿದೆ. ಇದು ಹಿಂದೆ ಎಲ್ಲಾ ಅರಸು ಮನೆತನಗಳಲ್ಲೂ ಇದ್ದ ಒಂದು ಪದ್ಧತಿಯಾಗಿದೆ. ಕೊಡವರಲ್ಲಿ ಕ್ಷತ್ರಿಯ ಸಮಾಜದ ಪದ್ಧತಿಯಿಂದಲೇ ಕಮ್ಮಿಕೋಂಬರ ರೂಢಿಯಲ್ಲಿ ಬಂದಿರ ಬೇಕು. ಈಗ

ಇದು ದೇವತಾ ಪೂಜೆಯ ಕೋಣೆಯಾಗಿ ಉಳಿದಿದೆ, ಆದರೆ ಮೂಲತಃ ಇದು ಅಂತಃಪುರದ ಪದ್ಧತಿಯಿಂದಲೇ ಬಂದಿದೆಯೆನ್ನಬಹುದು. ಆದುದರಿಂದ ಇದು ಕುರ್ದಿಗಳ ಪದ್ಧತಿ ಅಲ್ಲ ಎನ್ನಬಹುದು. ಭಾಷಾಶಾಸ್ತ್ರದ ದೃಷ್ಟಿಯಿಂದ ಗಮನಿಸಿದರೂ ಕೋಂಬರೆ ಎಂದರೆ ಕೋಣೆ, ಕನ್ನಿ ಎಂಬುದು ತಮಿಳು ಮೂಲದ ಪದವಾದುದರಿಂದ ಕೋಂಬರ ಎಂಬುದು ಹಾಗೆಯೇ ಆಗಿರಲಿಕ್ಕೆ ಸಾಕು.

ಕೊಡವರ ಮುಸುಕು ಹಾಕಿಕೊಳ್ಳುವ ಪದ್ಧತಿಯೂ ಕೂಡ ಚರ್ಚೆಗೆ ಗ್ರಾಸವಾಗಿದೆ. ಈಗಿನ ಕೊಡವ ಸ್ತ್ರೀಯರು ಮುಸುಕು ಹಾಕುವುದಿಲ್ಲ. ಆದರೂ ಅವರು ಮೊದಲು ಮುಸುಕು ಹಾಕಿ ಕೊಳ್ಳುತ್ತಿದುದರ ಸಂಕೇತ. ಇಂದು ಅವರ ತಲೆಯ ಮೇಲಿರುವ ವಸ್ತ್ರ. ಈ ಪದ್ಧತಿಯೂ ಕೂಡ ಹಿಂದುಗಳಲ್ಲಿನ ಅವಗುಂತನ ಪದ್ಧತಿಯೇ ವಿನಾ ಬೇರೇನು ಅಲ್ಲ. ಹಿಂದೆ ಕ್ಷತ್ರಿಯರಲ್ಲಿ ಸ್ವಯಂವರ ಪದ್ಧತಿಯಿದ್ದು ಆಕೆ ಮದುವೆಯಾದ ನಂತರ ಅವಗುಂತನ ಹಾಕುತ್ತಿದ್ದಳು. ಇದನ್ನೇ ಕೊಡವರು ಅನುಸರಿಸುತ್ತಿದ್ದಾರೆ. ಈ ಎಲ್ಲಾ ವಿಷಯಗಳು ಕೊಡವರು ಮೂಲತಃ ವೈದಿಕ ಕ್ಷತ್ರಿಯರು ಎಂಬುದನ್ನು ತೋರಿಸುತ್ತದೆಯೇ ವಿನಾ ಕುರ್ದಿಗಳಾಗಿದ್ದರು ಎಂಬುದನ್ನಲ್ಲ.

ಕೊಡವರು ತಲೆಯ ಮೇಲೆ ಧರಿಸುವ ಪಾನಿಮಂಡೆ ತುಣಿಯು ಕುರ್ದಿಗಳದ್ದಲ್ಲ. ಅದೂ ಹಿಂದೂಗಳದೇ ಎನ್ನಲಾಗಿದೆ. ಕ್ಷತ್ರಿಯರು ಬೆನ್ನ ಹಿಂದೆ ಬಟ್ಟೆ ಬೀಳುವಂತೆ ರುಮಾಲನ್ನು ಕಟ್ಟುತ್ತಿದ್ದರು. ಈ ರೀತಿ ಕಟ್ಟುವುದು ಉತ್ತರ ಭಾರತದಲ್ಲಿ. ಈ ರೀತಿ ರುಮಾಲನ್ನು ಕಟ್ಟಿಕೊಂಡು ಮಲೆನಾಡಿನಲ್ಲಿ ಕೆಲಸ ಮಾಡುವುದು ಕಷ್ಟವಾದ್ದರಿಂದ ಮತ್ತು ವಾಯುಗುಣದ ದೃಷ್ಟಿಯಿಂದ ಕಟ್ಟುವುದು ಅನಿವಾರ್ಯವಾದುದರಿಂದ ಅದು ಸಣ್ಣ ಬಟ್ಟೆಯ ರೂಪಕ್ಕೆ ಇಳಿದಿದೆ.

ಕುರ್ದಿ ಮತ್ತು ಕೊಡವರಲ್ಲಿ ಬಹುಪತ್ನಿತ್ವ ಇತ್ತು. ಇದು ಕುರ್ದಿಗಳದ್ದೇನಲ್ಲ. ಹಿಂದೆ ಹಿಂದೂಗಳಿಗೆ ಬಹುಪತ್ನಿತ್ವ ನಿಷಿದ್ಧವೇನಲ್ಲ. ಇದು ಶಾಸ್ತ್ರ ಸಮ್ಮತವಾಗಿಯೂ ಇದ್ದಿತು. ಆದರೆ ವಿಪರೀತಕ್ಕೆ ಹೋಗಬಾರದೆಂದೆನಿಸಿ ಒಂದೊಂದು ನಿಯಮವನ್ನು ಒಂದೊಂದು ಜನಾಂಗವು ವಿಧಿಸಿ ಕೊಂಡಿರಬಹುದು. ಆದುದರಿಂದ ಇದು ಕ್ಷತ್ರಿಯ ಪದ್ಧತಿಯೇ ವಿನಾಃ ಕುರ್ದಿ ಪದ್ಧತಿ ಅಲ್ಲ.

ಕೊಡವರು ಕನ್ನಿಮಂಗಲ ಎಂಬಿತ್ಯಾದಿ ಏಳು ವಿಧವಾದ ಸಂಸ್ಕಾರಗಳಿಗಳಿಗೆ ಮದುವೆ ಎನ್ನುತ್ತಾರೆ. ಈ ಮದುವೆಗಳು ಕೊಡವರಿಗೆ ವಿಹಿತವಾಗಿರುವುದರಿಂದ ಇವುಗಳಿಗೆ ಮೊದಲಿನ ಸಂಸ್ಕಾರವೆಂಬರ್ಥ ಹೋಗಿ ಈ ಸಂದರ್ಭದಲ್ಲಿ ಮಾತ್ರ ವಿವಾಹವೆಂಬ ಅರ್ಥ ಬಂದಿತು. ಕೊಡವರ ಮುಖ್ಯವಾದ ಹಬ್ಬಗಳಲ್ಲಿ ಹುತ್ತರಿಯೂ ಒಂದು. ಕುರ್ದಿಗಳೂ ಕೂಡ ವರ್ಷಕ್ಕೊಮ್ಮೆ ಹುತ್ತರಿಯನ್ನು ಹೋಲುವಂತಹ ಹಬ್ಬವನ್ನು ಆಚರಿಸುತ್ತಿದ್ದರಂತೆ. ಇಂತಹ ಒಂದು ಸಾಮ್ಯವನ್ನೇ ಆಧಾರ ವಾಗಿಟ್ಟುಕೊಂಡು ಕೊಡವರು ಕುರ್ದಿಗಳಾಗಿದ್ದರು ಎಂದು ಹೇಳಲಾಗುವುದಿಲ್ಲ. ಕುರ್ದಿಗಳು ವ್ಯವಸಾಯಗಾರರಾಗಿದ್ದುದರಿಂದ ಬಹುಶಃ ಅವರು ವರ್ಷಕ್ಕೊಮ್ಮೆ ಪೈರು ಕೊಯ್ದು ಹಬ್ಬವನ್ನಾಚರಿಸುತ್ತಿದ್ದಿರಬಹುದು. ಕರ್ನಾಟಕದ ಅನೇಕ ಗ್ರಾಮಗಳಲ್ಲಿ ಈಗಲೂ ಸುಗ್ಗಿಯ ಸಂದರ್ಭದಲ್ಲಿ ಹಬ್ಬ, ಕುಣಿತ ಇತ್ಯಾದಿ ಆಚರಣೆಗಳನ್ನು ಅನುಸರಿಸುತ್ತಾರೆ. ಆದರೆ ಇವುಗಳೆಲ್ಲವನ್ನು ನಾವು ಹುತ್ತರಿಯೆಂದು ಹೇಳಲು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಹುತ್ತರಿಯನ್ನು ಕೊಡವರು ಮುಖ್ಯವಾಗಿ ವ್ಯವಸಾಯದ ಅಧಿದೇವತೆಯಾದ ಇಗ್ಗುತಪ್ಪನ ಹಬ್ಬವೆಂದು ಆಚರಿಸುತ್ತಾರೆ. ಇದಕ್ಕೆ ಮುಖ್ಯ ಸ್ಫೂರ್ತಿ ಮಲೆಯಾಳದ ಓಣಂ. ಆದುದರಿಂದ ಇದು ಹೊರದೇಶದಿಂದ ಬಂದುದಲ್ಲ. ಇದು ಮಲೆಯಾಳದ ಹಬ್ಬವನ್ನನುಸರಿಸಿ ಬಂದಿರುವ ಹಬ್ಬ ಎಂಬುದು ಸುಸ್ಪಷ್ಟ. ಆದುದರಿಂದ ಈ ಹಬ್ಬ ಕುರ್ದಿಗಳ ಹಬ್ಬವಾಗಿರಲು ಸಾಧ್ಯವೇ ಇಲ್ಲ.

'ಈ ಜನದಲ್ಲೂ ಕೂಡಾವಳಿ ಮದುವೆ ಇದ್ದು ವಿಧವೆಗೆ ಪುನರ್‌ವಿವಾಹವುಂಟು ಇದೇ ಕೂಡಾವಳಿ. ಕೆಲವು ವೇಳೆ ಮದುವೆ ಮಾಡಿಕೊಡಲು ಶಕ್ತಿಯಿಲ್ಲದಿದ್ದರೆ ಕೂಡಾವಳಿ ಮಾಡಿಕೊಡಬಹುದು. ಇವರ ಮದುವೆಗಳಲ್ಲೂ ಮಂತ್ರ ತಂತ್ರಗಳೇನು ಇಲ್ಲ. ಆದರೆ ಬ್ರಾಹ್ಮಣನೊಬ್ಬ ಬಂದು ತೀರ್ಥ ಕೊಡುತ್ತಾನೆ. ಇದನ್ನೆಲ್ಲ ನೋಡಿದರೆ ಕೊಡವರಿಗೂ ಇವರಿಗೂ ಬಹಳ ಸಾಮ್ಯವಿದೆ ಎಂದೆನಿಸುತ್ತದೆ. ಈ ಆಶ್ಚರ್ಯಕರವಾದ ಸಾಮ್ಯದಿಂದ ಒಂದು ವಿಷಯ ಸ್ಪಷ್ಟ, ಅದೇನೆಂದರೆ ಕೊಡವರ ಪದ್ಧತಿಗಳೆಲ್ಲ ಭಾರತದ ಪದ್ಧತಿಗಳೆ. ಕುರ್ದಿಸ್ಥಾನದಿಂದಾಗಲಿ ಅಥವಾ ಬೇರೆಲ್ಲಿಂದಾಗಲಿ ಬಂದಿದ್ದಲ್ಲ.'

ಕೊಡವರಿಗೂ ಕುರ್ದಿಗಳಿಗೂ ಸಾಮ್ಯ ತೋರಿಸಲು ಸುಬ್ಬಯ್ಯನವರು ವಾದವೊಂದನ್ನು ಮಂಡಿಸುತ್ತಾರೆ. ಅವರ ಪ್ರಕಾರ ಕೊಡವರಲ್ಲಿ ವಿಧವೆಯರು ಬಿಳಿ ಬಟ್ಟೆಗಳನ್ನು ತೊಡಬೇಕು ಮತ್ತು ಈ ಪದ್ಧತಿ ಇತರ ಯಾವ ಹಿಂದೂ ಪಂಗಡಗಳಲ್ಲೂ ಇಲ್ಲ ಎಂಬುದು, ಕುರ್ದಿಗಳಲ್ಲೂ ಹೀಗೆಯೆ ಅವರಲ್ಲೂ ವಿಧವೆಯರು ಬಿಳಿ ಬಟ್ಟೆಯನ್ನು ಧರಿಸುತ್ತಿದ್ದರು ಎಂಬಿತ್ಯಾದಿ. ಆದರೆ ಈ ವಾದವನ್ನು ಸಕಾರಣವಾಗಿ ತಿರಸ್ಕರಿಸಬಹುದು. ಏಕೆಂದರೆ ಇತರ ಹಿಂದೂ ಜನಾಂಗಗಳಲ್ಲಿ ವಿಧವೆಯರು ಬಿಳಿ ಬಟ್ಟೆಯನ್ನು ಧರಿಸುವುದಿಲ್ಲ ಎಂಬುದು ಸತ್ಯಕ್ಕೆ ದೂರ. ಏಕೆಂದರೆ ವಿಧವೆಯರು ಬಿಳಿ ಬಟ್ಟೆಯನ್ನುಡುವುದು ಹಿಂದೂ ಧರ್ಮದ ಹಲವು ಪಂಗಡಗಳಲ್ಲಿ ಸಾಮಾನ್ಯವಾಗಿದೆ. ಉದಾಹರಣೆಗೆ ದಕ್ಷಿಣ ಭಾರತದಲ್ಲಿ ಬ್ರಾಹ್ಮಣ ಪಂಗಡದಲ್ಲಿ ಶ್ರೀ ವೈಷ್ಣವರ ಪಂಥದಲ್ಲಿ ವಡಗ ಎಂಬ ಒಂದು ಉಪಪಂಥದಲ್ಲಿ ವಿಧವೆಯರೆಲ್ಲರೂ ಬಿಳಿ ಸೀರೆಯನ್ನೇ ಉಡುತ್ತಾರೆ. ಇತರ ಪಂಥದವರು ಎಲ್ಲಾ ಬಣ್ಣಗಳನ್ನು ಉಡುತ್ತಾರೆ. ಆದುದರಿಂದ ಕೊಡವರಲ್ಲಿರುವ ಈ ಪದ್ಧತಿ ಹಿಂದೂಗಳ ಪದ್ಧತಿಯೇ ವಿನಾ ಬೇರೆಲ್ಲಿಂದಲೂ ಬಂದಿದ್ದಲ್ಲ.

'ಅಂತೂ ಮೇಲಿನ ವಿಷಯಗಳನ್ನು ನೋಡಿದರೆ ಕೊಡವರಲ್ಲೂ ಕುರ್ದಿಗಳಲ್ಲೂ ಇರುವ ಸಾಮ್ಯದಿಂದ ಕೊಡವರು ಕುರ್ದಿಗಳೆಂದು ಸಿದ್ಧವಾಗುವುದಿಲ್ಲ. ಏಕೆಂದರೆ ಕೊಡವರ ಪದ್ಧತಿಗಳೆಲ್ಲ ಶುದ್ಧ ಭಾರತೀಯ ಸಾಂಪ್ರದಾಯಿಕ ಪದ್ಧತಿಗಳೆ ಆಗಿವೆ. ಒಂದು ವೇಳೆ ಅವರು ಕುರ್ದಿಗಳಾಗಿದ್ದರೆ ಅವರ ಧಾರ್ಮಿಕ ಭಾವನೆಗಳು ಯಾವ ರೂಪದಲ್ಲಾದರು ಉಳಿಯುತ್ತಿದ್ದವು. ಆದರೆ ಯಾವುದೂ ಉಳಿದಿಲ್ಲ. ಕೊಡವರ ಧಾರ್ಮಿಕ ಭಾವನೆಗಳೆಲ್ಲ ಶುದ್ಧ ಭಾರತೀಯ ಭಾವನೆಗಳೆ ಅಲ್ಲದೆ ಕೊಡವರು ಕುರ್ದಿಗಳೇ ಎಂದು ಹೇಳುವುದಕ್ಕೆ ಯಾವ ಲಿಖಿತ ಆಧಾರವೂ ಇಲ್ಲ.'

ಕೊಡವರು ಕುರ್ದಿಗಳಲ್ಲ, ಅವರು ಭಾರತದ ಕ್ಷತ್ರಿಯರ ಮೂಲವನ್ನು ಹೊಂದಿರುವವರು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಕೊಡವರು ಉತ್ತರ ಭಾರತದಿಂದ ಬಂದ ಕ್ಷತ್ರಿಯರು ಮತ್ತು ಅವರು ಕೊಡಗಿನಲ್ಲಿ ನೆಲೆಸಿ ಅಲ್ಲಿನ ಮತ್ತು ಸುತ್ತಮುತ್ತಲಿನ ಜನರ ಸಂಪರ್ಕದಿಂದ ತಮ್ಮದೇ ಆದ ಒಂದು ಹೊಸ ಸಮಾಜವನ್ನು ರೂಪಿಸಿ ಕೊಂಡರು ಎನ್ನುವುದೇ ಆಗಿದೆ.

**ಪರಾಮರ್ಶನ ಗ್ರಂಥಗಳು**


- ಕೃಷ್ಣಯ್ಯ, ಡಿ.ಎನ್ (2014). *ಕನ್ನಡ ಸಾಹಿತ್ಯ ಪರಿಷತ್ತು*. ಕೊಡಗಿನ ಇತಿಹಾಸ
- ಲೆಫ್ಟಿನೆಂಟ್ ಪಿ.ಕಾನರ್. (1870). *ಮೆಮೊಯಿರ್ಸ್ ಆಫ್ ಕೊಡಗು ಸರ್ವೆ*. ಸೆಂಟ್ರಲ್ ಪ್ರೆಸ್.
- ನಡಿಕೇರಿಯಂಡ ಚಿನ್ನಪ್ಪ. (1924). *ಪಟ್ಟೋಲೆ ಪಳಮೆ*. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ.
- ರಾಮಾನುಜಂ, ಪಿ.ಎಸ್. (1975). *ಕೊಡವರು*. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.